ದಿನಾಂಕ 07-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎ.ಎಫ್.ಸಿ ವಕೀಲರಿಂದಃ</u>**

1 ನೇ ಪ್ರತಿವಾದಿ ಹಾಜರಿದ್ದು, ತಮ್ಮ ವಕೀಲರು ಆಸ್ಪತ್ರೆಗೆ ಅವರ ತಂದೆಯ ಚಿಕಿತ್ಸೆಗಾಗಿ ಹೋಗಿರುವುದರಿಂದ ಪಾಟೀ ಸವಾಲು ಮಾಡಲು ಇಂದು ನ್ಯಾಯಾಲಯಕ್ಕೆ ಹಾಜರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದೇಶದ ಹಾಳೆಗಳನ್ನು ನೋಡಲಾಗಿ ಈಗಾಗಲೇ ಖರ್ಚು ಸಹಿತ ಸಾಕಷ್ಟು ಸಮಯಾವಕಾಶವನ್ನು ಪಾಟೀ ಸವಾಲಿಗೆ ಮುಂದೂಡಿದೆ ಮತ್ತು ಹಿಂದಿನ ದಿನಾಂಕದಂದು ನಿಗದಿ ಮಾಡಿದ ಖರ್ಚನ್ನು ಸಹ ಪಾವತಿ ಮಾಡಿರುವುದಿಲ್ಲ. 1 ನೇ ಪ್ರತಿವಾದಿಯು ಹೇಳಿದ ಕಾರಣವು ಸಕಾರಣವಾಗಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲುಃ 4 ರಿಂದ 7 ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ ಎಂ.ಹೆಚ್.ಕೆ ವಕೀಲರಿಂದಃ</u>**

ಸದರಿ ಪ್ರತಿವಾದಿಗಳು ಮತ್ತು ವಕೀಲರು ಗೈರು ಹಾಜರು. ಈಗಾಗಲೇ ಸಾಕಷ್ಟು ಸಮಯಾವಕಾಶ ನೀಡಲಾಗಿದೆ. ಆದ್ದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ